ದಿನಾಂಕ: 12.06.2025

ಅಸಲುದಾವೆ: 48/2015

ಡಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: 21 ಮತ್ತು 33 ನೇ ಪ್ರತಿವಾದಿ ಪರ ವಕೀಲರಿಂದ:

ಸರ್ವೆ ನಂ.391/2 ಸ್ವತ್ತನ್ನು ದಾಸಶೆಟ್ಟಿ ಬಿನ್ ಮರಿಶೆಟ್ಟಿ ರವರು ದಿ.14.07.1949 ರಲ್ಲಿ ಬಸಮ್ಮ ಮತ್ತು ಅವರ ದತ್ತು ಮಗ ರಾಜಶೇಖರ್ ಅವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ದಾಸಶೆಟ್ಟಿ ಬಿನ್ ಮರಿಶೆಟ್ಟಿ ರವರು ಖರೀದಿಸಿದ ನಂತರ ಅವರೇ ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿ ಹೌದು ಅವರು ಮತ್ತು ಅವರ ಮಗ ಇದ್ದರು ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತಿನ ಖಾತೆ ದಾಸಶೆಟ್ಟಿ ಬಿನ್ ಮರಿಶೆಟ್ಟಿ ರವರಿಗೆ ಬದಲಾವಣೆ ಯಾಗಿರುತ್ತದೆ ಎಂದರೆ ಸರಿ. ನಂತರ ದಾಸಶೆಟ್ಟಿ ಬಿನ್ ಮರಿಶೆಟ್ಟಿ ರವರು ತಾವು ಖರೀದಿಸಿದ 1 ಎಕರೆ 1 ಗುಂಟೆ ಜಮೀನಿನ ಪೈಕಿ 5 ಗುಂಟೆ ಜಮೀನನ್ನು ದಾಸಶೆಟ್ಟಿ ಮತ್ತು ಅವರ ಹೆಂಡತಿ ನಿಂಗಮ್ಮ, ಮಕ್ಕಳಾದ ರಾಮಶೆಟ್ಟಿ, ಕೆಂಪಶೆಟ್ಟಿ ಸೇರಿ ದಿ.25.04.1975 ರಲ್ಲಿ ರಾಮೋಜಿರಾವ್ ಅವರ ಮಗ ಆರ್.ಶ್ರೀನಿವಾಸ್ ರಾವ್ ಎನ್ನುವವರಿಗೆ ಮಾರಾಟ ಮಾಡಿದರು ಎಂದರೆ ಸರಿ. ಸದರಿ 5 ಗುಂಟೆ ಜಮೀನನ್ನು ಆರ್.ಶ್ರೀನಿವಾಸ್‌ರಾವ್ ಅವರು ಖರೀದಿಸಿದ ನಂತರ ಅವರೇ ಸ್ವಾಧೀನದಲ್ಲಿ ಇದ್ದರು ಮತ್ತು ಅವರ ಹೆಸರಿಗೆ ಖಾತೆ ಪಹಣಿಯಾಯಿತು ಎಂದರೆ ಸರಿ. ಸದರಿ ಆರ್.ಶ್ರೀನಿವಾಸ್‌ರಾವ್ ಅವರು ಖರೀದಿಸಿದ 5 ಗುಂಟೆ ಜಮೀನನ್ನು ದಿ.25.09.1975 ರಲ್ಲಿ ಈ ದಾವೆಯ 33 ನೇ ಪ್ರತಿವಾದಿಯಾದ ಎಂ.ಚೌಡಯ್ಯನವರಿಗೆ ಮಾರಾಟ ಮಾಡಿದರು ಎಂದರೆ ಸಾಕ್ಷಿ ಹೌದು ಕೇಳಿ ತಿಳಿದುಕೊಂಡಿದ್ದೇನೆ ಮತ್ತು ದಾಖಲಾತಿಗಳನ್ನು ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಆ ಕ್ರಯ ಪತ್ರದ ಪ್ರಕಾರ ಚೌಡಯ್ಯನವರ ಹೆಸರಿಗೆ ದಾಖಲಾತಿಗಳು ವರ್ಗಾವಣೆಯಾಗಿದೆ ಎಂದರೆ ಸಾಕ್ಷಿ ದಾಖಲಾತಿಗಳನ್ನು ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಶ್ರೀನಿವಾಸ್ ರಾವ್ ಅವರು ತೀರಿಕೊಂಡ ನಂತರ ಅವರ ಹೆಂಡತಿ ಮುನ್ನಾಬಾಯಿ ಮತ್ತು ಅವರ ಮೈನರ್ ಮಗ ಮೂರ್ತಿರಾವ್ ರವರ ಗಾರ್ಡಿಯನ್ ತಾಯಿ ಮುನ್ನಾಬಾಯಿ ರವರು ದಿ.01.09.1977 ರಲ್ಲಿ 33 ನೇ ಪ್ರತಿವಾದಿ ಎಂ.ಚೌಡಯ್ಯನವರಿಗೆ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಪತ್ರ

ನೋಡಿದ್ದೇನೆ, ಬರೆದುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. 33 ನೇ ಪ್ರತಿವಾದಿ ಎಂ.ಚೌಡಯ್ಯನವರ ಹೆಸರಿಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ. ಸದರಿರವರು ಖರೀದಿಸಿದ 5 ಗುಂಟೆ ಜಮೀನನ್ನು ಅಲಿನೇಷನ್ ಮಾಡಿಸಿದ್ದು ಮದ್ದೂರು ಪುರಸಭೆಯಲ್ಲಿ ಖಾತೆಯಾಗಿದೆ ಎಂದರೆ ಸಾಕ್ಷಿ ಅಲಿನೇಷನ್ ಮಾಡಿಸಿದ್ದಾರೆ, ಆದರೆ ಪ್ರಸ್ತುತ 5 ಗುಂಟೆ ವಿಸ್ತೀರ್ಣ ಇಲ್ಲ ಎಂದು ಉತ್ತರಿಸುತ್ತಾರೆ. ನೀವೇನು ಅವರ ಜಮೀನು ಅಳತೆ ಮಾಡಿಲ್ಲ ಎಂದರೆ ಸಾಕ್ಷಿ ಅಳತೆ ಮಾಡಿಲ್ಲ ಆದರೆ 2002-03 ನೇ ಸಾಲಿನಲ್ಲಿ 4 ಪಥ ರಸ್ತೆ ಮಾಡುವಾಗ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಅವರ ಜಮೀನು ಪಕ್ಕವೇ ನಮ್ಮ ಜಮೀನು ಇದೆ ಅದರಲ್ಲಿಯೂ ಭೂ ಸ್ವಾಧೀನ ಪಡೆಸಿಕೊಂಡಿರುತ್ತಾರೆ ಹಾಗಾಗಿ ವಿಸ್ತೀರ್ಣ ಕಡಿಮೆ ಇದೆ ಎಂದು ಉತ್ತರಿಸುತ್ತಾರೆ. ನಾನು 544.5 ಅಡಿಗೆ ಸರ್ಕಾರದಿಂದ ಪರಿಹಾರವನ್ನು ಪಡೆದುಕೊಂಡಿರುತ್ತೇನೆ. 33 ನೇಪ್ರತಿವಾದಿಯ ಜಮೀನು ರಸ್ತೆಗಾಗಿ ಭೂ ಸ್ವಾಧೀನವಾಗಿಲ್ಲ ಮತ್ತು ಅವರು ಪರಿಹಾರವನ್ನು ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ಅವರ ಜಮೀನಿನ ಪಕ್ಕದಲ್ಲಿಯೇ ನಮ್ಮ ಜಮೀನು ಇರುವುದರಿಂದ ಅವರ ಜಮೀನು ಭೂ ಸ್ವಾಧೀನವಾಗಿದೆ ಎಂದು ಪೂರ್ವಭಾವನೆ ಮಾಡಿ ಹೇಳುತ್ತಿದ್ದೇನೆ, ಆದರೆ ಅವರು ಪರಿಹಾರವನ್ನು ಪಡೆದುಕೊಂಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಅವರು ಖರೀದಿ ಮಾಡಿರುವ ಜಮೀನಿನಲ್ಲಿ ಒಂದು ಆರ್.ಸಿ.ಸಿ ಮನೆ ಮತ್ತು ಒಂದು ಶೀಟ್ ಮನೆ ಕಟ್ಟಿದ್ದಾರೆ ಎಂದರೆ ಸರಿ. ನೆಲಮಹಡಿಯಲ್ಲಿ ಅಂಗಡಿ ಮಳಿಗೆಗಳನ್ನು ಕಟ್ಟಿದ್ದಾರೆ ಎಂದರೆ ಸರಿ. ಅವುಗಳನ್ನು ಬಾಡಿಗೆಗೆ ಕೊಟ್ಟು ಮನೆಯಲ್ಲಿ ಅವರೇ ವಾಸವಾಗಿದ್ದಾರೆ ಎಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.